RNU AIR DHARWAD

# MAY 31, 2024

## ALL INDIA RADIO - DHARWAD

## PRADESH SAMACHARA (KANNADA) 7:05 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **2024, 'ಶೈಕ್ಷಣಿಕ ಬಲವರ್ಧನೆಯ ವರ್ಷ' ಧ್ಯೇಯದೊಂದಿಗೆ, ರಾಜ್ಯಾದ್ಯಂತ ಶಾಲೆಗಳು ಇಂದು ಆರಂಭ.**
- **ಮುಂಗಾರು ಹಂಗಾಮಿಗೆ, ಗುಣಮಟ್ಟದ ಬಿತ್ತನೆ ಬೀಜಗಳ ಆಯ್ಕೆಗೆ ಪ್ರಾಧಾನ್ಯವಿರಲಿ – ಡಾಕ್ಟರ್ ಎಚ್.ಎಂ. ಪಲ್ಲವಿ.**
- **ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ, ಅಭಿವೃದ್ಧಿ ನಿಗಮದ ಅವ್ಯವಹಾರ; ತನಿಖೆ ಬಳಿಕ ಸತ್ಯಾಂಶ ಬೆಳಕಿಗೆ – ಜಿ. ಪರಮೇಶ್ವರ.**
- **ಇಂದು, ತಂಬಾಕು ಮುಕ್ತ ವಿಶ್ವ ದಿನಾಚರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ಪ್ರಸಕ್ತ ಶೈಕ್ಷಣಿಕ ವರ್ಷವನ್ನು, 'ಶೈಕ್ಷಣಿಕ ಬಲವರ್ಧನೆಯ ವರ್ಷ' ಎಂದು, ಶಿಕ್ಷಣ ಇಲಾಖೆ ಘೋಷಿಸಿದೆ. ರಾಜ್ಯದ ಶಾಲೆಗಳು ಮದುವಣಗಿತ್ತಿಯಂತೆ ಸಿಂಗಾರಗೊಂಡು, ಇಂದು ಮಕ್ಕಳನ್ನು ಸ್ವಾಗತಿಸಲು ಸಜ್ಜಾಗಿವೆ. ಎರಡು ತಿಂಗಳ ರಜೆಯ ಬಳಿಕ ಮಕ್ಕಳು ಶಾಲೆಗಳಿಗೆ ಆಗಮಿಸಲಿದ್ದು, ಹೊಸ ಸಮವಸ್ತ್ರ ಮತ್ತು ಪಠ್ಯ ಪುಸ್ತಕಗಳು ಅವರಿಗಾಗಿ ಕಾಯ್ದಿವೆ. ವಿಜಯನಗರ ಜಿಲ್ಲೆ ಹೊಸಪೇಟೆ ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಚನ್ನಬಸಪ್ಪ ಮಗ್ಗದ, ಪೂರ್ವ ಸಿದ್ಧತೆ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.**

<><><>

**ಕ್ಷೇತ್ರ ಶಿಕ್ಷಣಾಧಿಕಾರಿ ಚನ್ನಬಸಪ್ಪ ಮಗ್ಗದ ಧ್ವನಿ 48 ಸೆಕೆಂದುಗಳು.**

<><><>

ಸರ್ಕಾರಿ ಶಾಲೆ ಮಕ್ಕಳು, ಇಂಗ್ಲಿ ್ ಭಾ ೆ ಪರಿಣಿತಿ ಸಾಧಿಸುವಂತೆ, ಶಿಕ್ಷಣ ಇಲಾಖೆ ಸ್ಪೋಕನ್ ಇಂಗ್ಲೀ ್ ತರಗತಿ ಪರಿಚಯಿಸಲಿದೆ. ಇಂಗ್ಲಿ ್ನಲ್ಲಿ ಸಂಭಾ ಣೆ, ಕತೆ ಹೇಳುವುದು, ದೈನಂದಿನ ಬದುಕಿನ ಆಗುಹೋಗು ಸಹಪಾಠಿಗಳಿಗೆ ವಿವರಿಸುವುದನ್ನು ಒಳಗೊಂಡು, ಇಂಗ್ಲಿ ್ ಭಾ ೆಯನ್ನು ಸುಲಭವಾಗಿ ಮನದಟ್ಟು ಮಾಡಿಸಲು ಶಿಕ್ಷಣ ಇಲಾಖೆ ನಿರ್ಧರಿಸಿದೆ.

<><><>

ಒಂದು ಶಾಲೆ ತೊರೆದು, ಮತ್ತೊಂದು ಶಾಲೆಗೆ ಸೇರುವ ಮಕ್ಕಳು, ಇನ್ನು ಮುಂದೆ ಇ – ಮೇಲ್ ಮೂಲಕವೇ ವರ್ಗಾವಣೆ ಪತ್ರ ಅಥವಾ ಟಿ.ಸಿ. ಪಡೆದುಕೊಳ್ಳಬೇಕು ಎಂದು, ಶಿಕ್ಷಣ ಇಲಾಖೆ ಸ್ಪಷ್ಟಪಡಿಸಿದೆ.

<><><>

ಆಶಾಭಾವದಿಂದ ಬಿತ್ತನೆ ಬೀಜಗಳನ್ನು ಖರೀದಿಸಿ, ತಮ್ಮ ಹೊಲದಲ್ಲಿ ಬಿತ್ತುವ ರೈತರಿಗೆ ಕಾಡುವ ಪ್ರಶ್ನೆಗಳು, ಹತ್ತು–ಹಲವು. ಪ್ರಸಕ್ತ ಮುಂಗಾರು ಹಂಗಾಮಿಗೆ ಬೆಳೆ ಆಯ್ಕೆ ಹೇಗೆ?, ಗುಣಮಟ್ಟದ ತಳಿ ಮತ್ತು ಉತ್ತಮ ಬೀಜಗಳನ್ನು ಪಡೆಯುವುದು ಹೇಗೆ? ಬಳಿಕ, ಯೋಗ್ಯ ಬೆಳೆಗೆ, ಯೋಗ್ಯ ಬೆಲೆ ಪಡೆಯುವುದು ಕೂಡ ಮಹತ್ವದ್ದು. ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ, ಬೀಜ ತಂತ್ರಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕಿ, ಡಾಕ್ಟರ್ ಪಲ್ಲವಿ ಎಚ್.ಎಂ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಡಾಕ್ಟರ್ ಪಲ್ಲವಿ ಎಚ್.ಎಂ. ಧ್ವನಿ 50 ಸೆಕೆಂದುಗಳು.

<><><>

ನಾಳೆ ಜೂನ್ 1 ರಿಂದ, ದಕ್ಷಿಣ ಒಳನಾಡು, ಮಲೆನಾಡು, ಕರಾವಳಿ ಮತ್ತು ಉತ್ತರ ಒಳನಾಡು ಜಿಲ್ಲೆಗಳಲ್ಲಿ, ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ಜೂನ್ 2 ರಿಂದ, ಇಡೀ ರಾಜ್ಯಾದ್ಯಂತ ಗುಡುಗು, ಮಿಂಚು ಮತ್ತು ಬಿರುಗಾಳಿಯೊಂದಿಗೆ, ವ್ಯಾಪಕ ಮಳೆಯಾಗುವ ಸಾಧ್ಯತೆಯಿದೆ ಎಂದು, ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ತಿಳಿಸಿದೆ. ನೈಋತ್ಯ ಮುಂಗಾರು ಕೇರಳವನ್ನು ಪ್ರವೇಶಿಸಿದ್ದು, ಇನ್ನೆರಡು ದಿನಗಳಲ್ಲಿ, ರಾಜ್ಯದ ಕೆಲವು ಭಾಗಗಳಿಗೆ ವ್ಯಾಪಿಸಲಿದೆ ಎಂದು, ಮುನ್ಸೂಚನೆ ನೀಡಿದೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಮಹರ್ಷಿ ವಾಲ್ಮೀಕಿ ಪರಿಶಿ ್ಟ ಪಂಗಡಗಳ ಅಭಿವೃದ್ಧಿ ನಿಗಮದ, ದಲಿತರಿಗೆ ಮೀಸಲಿದ್ದ 187 ಕೋಟಿ ರೂಪಾಯಿ ಅನುದಾನವನ್ನು, ಕಾಂಗ್ರೆಸ್ ಸರ್ಕಾರ ದುರ್ಬಳಕೆ ಮಾಡಿದೆ ಎಂದು, ವಿಧಾನಸಭೆ ವಿಪಕ್ಷ ನಾಯಕ ಆರ್. ಅಶೋಕ್ ಬೆಂಗಳೂರಿನಲ್ಲಿ ಆರೋಪಿಸಿದ್ದಾರೆ. ಪರಿಶಿ ್ಟ ಪಂಗಡಗಳ ಅಭಿವೃದ್ಧಿ ಖಾತೆ ಸಚಿವ ಬಿ.ನಾಗೇಂದ್ರ ಅವರು, ಜೂನ್ 6 ರೊಳಗೆ ರಾಜಿನಾಮೆ ನೀಡಬೇಕು. ಇಲ್ಲದಿದ್ದರೆ ಬಿಜೆಪಿ ರಾಜ್ಯಾದ್ಯಂತ ಪ್ರತಿಭಟಿಸಲಿದೆ ಎಂದು, ಹೇಳಿದರು.

<><><>

ಬಂಡವಾಳ ಹೂಡಿಕೆ ಚೆನ್ನೈಗೆ ಹೋಗಿದೆ; ಬಂಡವಾಳ ತರುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎಂಬ, ರಾಜ್ಯ ಬಿಜೆಪಿ ನಾಯಕರ ಆಪಾದನೆಯಲ್ಲಿ ಹುರುಳಿಲ್ಲ ಎಂದು, ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಖಾತೆ ಸಚಿವ ಎಂ.ಬಿ.ಪಾಟೀಲ್, ಜಾಲತಾಣ ಎಕ್ಸ್‌ನಲ್ಲಿ, ಪ್ರತಿಕ್ರಿಯಿಸಿದ್ದಾರೆ.

<><><>

ಗೃಹ ಖಾತೆ ಸಚಿವ ಡಾಕ್ಟರ್ ಜಿ. ಪರಮೇಶ್ವರ, ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ವಾಲ್ಮೀಕಿ ನಿಗಮದ ಅವ್ಯವಹಾರದ ಕುರಿತಂತೆ ತನಿಖೆಗೆ ಆದೇಶಿಸಲಾಗಿದೆ ಎಂದರು.

<><><>

ನಿಗಮದ ಅಧಿಕಾರಿ ಚಂದ್ರಶೇಖರ್, ಶಿವಮೊಗ್ಗದಲ್ಲಿ ಆತ್ಮಹತ್ಯೆ ಮಾಡಿಕೊಂಡ ಪ್ರಕರಣದ ಹಿನ್ನೆಲೆ, ಮೈಸೂರು, ಬಳ್ಳಾರಿ ಸೇರಿದಂತೆ, ರಾಜ್ಯದ ವಿವಿಧೆಡೆ ಹಲವು ಸಂಘಟನೆಗಳು ಪ್ರತಿಭಟನೆ ನಡೆಸಿದವು.

<><><>

ಶಿವಮೊಗ್ಗ ಜಿಲ್ಲೆ ಉಸ್ತುವಾರಿ ಸಚಿವ ಮಧು ಬಂಗಾರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಚಂದ್ರಶೇಖರ್ ನಿವಾಸಕ್ಕೆ ಭೇಟಿ ನೀಡಿ, ಕುಟುಂಬ ವರ್ಗಕ್ಕೆ ಸಾಂತ್ವನ ಹೇಳಿದರು.

<><><>

ಇಂದು ತಂಬಾಕು ಮುಕ್ತ ವಿಶ್ವ ದಿನ. ಜಗತ್ತಿನಾದ್ಯಂತ 13 ರಿಂದ 15 ವರ್ಷದೊಳಗಿನ, 37 ಮಿಲಿಯನ್ ಯುವಜನ, ತಂಬಾಕು ಉತ್ಪನ್ನಗಳನ್ನು ಸೇವಿಸಿ, ಕ್ಯಾನ್ಸರ್ ಸೇರಿದಂತೆ, ಇತರೆ ಗಂಭೀರ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ತಂಬಾಕು ಸೇವನೆಯಿಂದ ಉಂಟಾಗಬಹುದಾದ ಕಾಯಿಲೆಗಳ ಬಗ್ಗೆ, ಯುವ ಜನರಲ್ಲಿ ಜಾಗೃತಿ ಮೂಡಿಸಲು, ಸಾಮುದಾಯಿಕ ಸಂಘಟಿತ ಪ್ರಯತ್ನಕ್ಕೆ, ಒತ್ತು ನೀಡುವಂತೆ, ವಿಶ್ವ ಆರೋಗ್ಯ ಸಂಸ್ಥೆ ಕರೆ ನೀಡಿದೆ.

<><><>

ವಿಶ್ವಾದ್ಯಂತ ಪ್ರತಿ ವರ್ಷ, ತಂಬಾಕು ಉತ್ಪನ್ನಗಳ ನೇರ ಸೇವನೆಯಿಂದ 10 ಲಕ್ಷ ಜನ, ಪರೋಕ್ಷ ಸೇವನೆಯಿಂದ ಅಂದಾಜು 2 ಲಕ್ಷದಷ್ಟು ಜನ, ಜೀವ ಕಳೆದುಕೊಳ್ಳುತ್ತಿದ್ದಾರೆ ಎಂದು, ಚಿತ್ರದುರ್ಗ ಜಿಲ್ಲೆ ಹಿರಿಯ ಸಿವಿಲ್ ನ್ಯಾಯಾಧೀಶ ಎಂ. ವಿಜಯ ಹೇಳಿದ್ದಾರೆ. ಚಂದ್ರವಳ್ಳಿಯ ಎಸ್.ಜೆ.ಎಂ. ಪದವಿ ಮಹಾವಿದ್ಯಾಲಯದಲ್ಲಿ, ತಂಬಾಕು ಮುಕ್ತ ವಿಶ್ವ ದಿನಾಚರಣೆಯಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು.

<><><>

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಜ್ಯಾದ್ಯಂತ ಇಂದು ಬೆಳಗ್ಗೆ 9.30ಕ್ಕೆ, ತಂಬಾಕು ರಹಿತ ವಿಶ್ವ ದಿನದ ಅಂಗವಾಗಿ, ಜನಜಾಗೃತಿ ಜಾಥಾ ಆಯೋಜಿಸಿದೆ.

<><><>

ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿ, ಹಾಸನ ಸಂಸದ ಪ್ರಜ್ವಲ್ ರೇವಣ್ಣ, ಜರ್ಮನಿಯ ಮ್ಯೂನಿಕ್‌ನಿಂದ ಬೆಂಗಳೂರಿಗೆ ಆಗಮಿಸಿದ್ದು, ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ, ವಿಶೇಷ ತನಿಖಾ ತಂಡದ ಅಧಿಕಾರಿಗಳು ಬಂಧಿಸಿದ್ದಾರೆ.

<><><>

ಜೂನ್ 3 ರಂದು ನಡೆಯುವ, ವಿಧಾನಪರಿಷತ್ತಿನ 3 ಪದವಿಧರ ಹಾಗೂ 3 ಶಿಕ್ಷಕರ ಮತಕ್ಷೇತ್ರಗಳ ಚುನಾವಣೆ ನಿಮಿತ್ತ, ಅರ್ಹ ಮತದಾರರಿಗಷ್ಟೇ ಸೀಮಿತವಾಗಿ, ವಿಶೇಷ ಸಾಂದರ್ಭಿಕ ರಜೆ ಮಂಜೂರು ಮಾಡುವಂತೆ, ರಾಜ್ಯ ಸರ್ಕಾರ ಆದೇಶಿಸಿದೆ. ಈಶಾನ್ಯ ಪದವಿಧರ ಮತಕ್ಷೇತ್ರ, ನೈಋತ್ಯ ಪದವಿಧರ ಕ್ಷೇತ್ರ, ಬೆಂಗಳೂರು ಪದವಿಧರ ಕ್ಷೇತ್ರ,

ಆಗ್ನೇಯ ಶಿಕ್ಷಕರ ಕ್ಷೇತ್ರ, ದಕ್ಷಿಣ ಶಿಕ್ಷಕರ ಕ್ಷೇತ್ರ, ನೈರುತ್ಯ ಶಿಕ್ಷಕರ ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದೆ. ಈ ಕ್ಷೇತ್ರದ ವ್ಯಾಪ್ತಿಗೆ ಬರುವ ಜಿಲ್ಲೆಗಳಲ್ಲಿ, ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಿಗೆ ಈ ಆದೇಶ ಅನ್ವಯವಾಗಲಿದೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ, ತಮಿಳುನಾಡಿನ ಕನ್ಯಾಕುಮಾರಿಯಲ್ಲಿ, ಭಗವತಿಯ ಅಮ್ಮನ ಮಂದಿರದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಸ್ವಾಮಿ ವಿವೇಕಾನಂದ ಅವರು, ಧ್ಯಾನ ಮಾಡಿದ್ದ ಸ್ಥಳದಲ್ಲಿ, ಹೊಸದಾಗಿ ನಿರ್ಮಿಸಿರುವ ಮಂಟಪದಲ್ಲಿ, ಅವರು ಧ್ಯಾನ ಮಾಡಲಿದ್ದಾರೆ. ಸ್ವಾಮಿ ವಿವೇಕಾನಂದ ಶಿಲಾ ಸ್ಮಾರಕಕ್ಕೆ ಭೇಟಿ ನೀಡಲಿದ್ದಾರೆ. ನಾಳೆ ಜೂನ್ 1 ಸಂಜೆ ವರೆಗೆ, 45 ಗಂಟೆಗಳ ಕಾಲ ಪ್ರಧಾನಮಂತ್ರಿ ಧ್ಯಾನ ನಿರತರಾಗಲಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಐ.ಐ.ಟಿ. ಮದ್ರಾಸ್‌ನ ಸ್ಟಾರ್ಟ್‌ಅಪ್, "Agnikul Cosmos", 3ಡಿ ಮುದ್ರಿತ ಇಂಜಿನ್‌ನೊಂದಿಗೆ, ಇಸ್ರೋ ಸಹಕಾರದಲ್ಲಿ, 'ಅಗ್ನಿಬಾಣ' ನಾಮಾಂಕಿತ, ವಿಶ್ವದ ಮೊದಲ ರಾಕೆಟ್‌ಅನ್ನು ಯಶಸ್ವಿಯಾಗಿ ಉಡಾವಣೆ ಮಾಡಿದೆ.

ಬೆಂಗಳೂರಿನ, ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾದೆಮಿ, ಪದವಿ ಪೂರ್ವ ವಿದ್ಯಾರ್ಥಿಗಳಿಗಾಗಿ, 'ಉನ್ನತ ಶಿಕ್ಷಣ ಮತ್ತು ಉದ್ಯೋಗಾವಕಾಶಗಳು' ವಿಷಯವಾಗಿ, ನಾಳೆಯಿಂದ ಎರಡು ದಿನ, ಆನ್‌ಲೈನ್ ವೆಬಿನಾರ್ ಆಯೋಜಿಸಿದೆ.

<><><>

ಜೂನ್ 5 ಪರಿಸರ ವಿಶ್ವ ದಿನದ ಹಿನ್ನೆಲೆ, ಚಿತ್ರದುರ್ಗದ ಮುರುಘರಾಜೇಂದ್ರ ಬೃಹನ್ಮಠ, ಅರಣ್ಯ ಇಲಾಖೆಯ ಸಹಕಾರದಲ್ಲಿ, ಏಳು ಕಡೆ ಸಾವಿರಕ್ಕೂ ಹೆಚ್ಚು ಸಸಿ ನೆಡುವ ಸಪ್ತಾಹಕ್ಕೆ, ಚಾಲನೆ ನೀಡಿದೆ.

<><><>

ಮೀನುಗಳ ವಂಶಾಭಿವೃದ್ಧಿ ಋತುವಿನ ಹಿನ್ನೆಲೆ, ನಾಳೆ ಜೂನ್ 1 ರಿಂದ ಜುಲೈ 31ರ ವರೆಗೆ, ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲೂಕು ಶಾಂತಿಸಾಗರ ಜಲಾಶಯದಲ್ಲಿ ಮೀನುಗಾರಿಕೆಯನ್ನು ನಿಷೇಧಿಸಿ, ಮೀನುಗಾರಿಕೆ ಇಲಾಖೆ ಆದೇಶಿಸಿದೆ.

<><><>

ಧಾರವಾಡದ ಶಿಕ್ಷಣ ತಜ್ಞ, ವೆಂಕಟೇಶ ಮಾಚಕನೂರ ರಚಿಸಿದ, 'ಸುಲಿದ ಬಾಳೆಯ ಹಣ್ಣಿನಂದದಿ' ಕೃತಿ, ಇಂದು ಸಂಜೆ 6 ಗಂಟೆಗೆ, ಕರ್ನಾಟಕ ವಿದ್ಯಾವರ್ಧಕ ಸಂಘದ, ರಾ.ಹ. ದೇಶಪಾಂಡೆ ಸಭಾಭವನದಲ್ಲಿ ಬಿಡುಗಡೆಯಾಗಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 2024, 'ಶೈಕ್ಷಣಿಕ ಬಲವರ್ಧನೆಯ ವರ್ಷ' ಧ್ಯೇಯದೊಂದಿಗೆ, ರಾಜ್ಯಾದ್ಯಂತ ಶಾಲೆಗಳು ಇಂದು ಆರಂಭ.
- ಮುಂಗಾರು ಹಂಗಾಮಿಗೆ, ಗುಣಮಟ್ಟದ ಬಿತ್ತನೆ ಬೀಜಗಳ ಆಯ್ಕೆಗೆ ಪ್ರಾಧಾನ್ಯವಿರಲಿ – ಡಾಕ್ಟರ್ ಎಚ್.ಎಂ. ಪಲ್ಲವಿ.

- ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ, ಅಭಿವೃದ್ಧಿ ನಿಗಮದ ಅವ್ಯವಹಾರ: ತನಿಖೆ ಬಳಿಕ ಸತ್ಯಾಂಶ ಬೆಳಕಿಗೆ – ಜಿ. ಪರಮೇಶ್ವರ.
- ಇಂದು, ತಂಬಾಕು ಮುಕ್ತ ವಿಶ್ವ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ